# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2013-14ನೇ ಸಾಲಿನ ಆರ್ಥಿಕ ವರ್ಷದಲ್ಲಿ 13ನೇ ಹಣಕಾಸು ಆಯೋಗದ ಅನುದಾನದಡಿ ರಸ್ತೆ ಮತ್ತು ಸೇತುವೆ ನಿರ್ವಹಣೆಗೆ ಅನುದಾನ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ:
1. 13ನೇ ಹಣಕಾಸು ಆಯೋಗ ಅನುದಾನ - ರಸ್ತೆ ಮತ್ತು ಸೇತುವೆಗಳ ನಿರ್ವಹಣಾ ಕಾಮಗಾರಿಗಳ ಅನುಷ್ಠಾನಕ್ಕಾಗಿ ಅನುದಾನ ಹಂಚಿಕೆ ಮಾಡಿ ಹೊರಡಿಸಿದ ಆದೇಶ ಸಂಖ್ಯೆ: ಗ್ರಾಅಪ/127/ಆರ್‌ಆರ್‌ಸಿ/2013, ದಿನಾಂಕ:11-6-2013.
2. ಇಲಾಖಾ ಕ್ರೋಢೀಕೃತ ಕ್ರಿಯಾ ಯೋಜನೆಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ/696/ ಆಆಕೋ/2013, ದಿನಾಂಕ13-11-2013.
3. ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ/88/ ಆಆಕೋ/2013, ದಿನಾಂಕ18-9-2013.
4. ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:FD/04/TFP/2012, ದಿನಾಂಕ:27-4-2012.

**ಪ್ರಸ್ತಾವನೆ:**

13ನೇ ಹಣಕಾಸು ಆಯೋಗದಡಿ 2013-14ನೇ ಸಾಲಿನಲ್ಲಿ ರಸ್ತೆ ನಿರ್ವಹಣೆಗಾಗಿ ಒದಗಿಸಲಾದ ರೂ.125.40ಕೋಟಿ ಅನುದಾನವನ್ನು ಗ್ರಾಮೀಣ ರಸ್ತೆಗಳ ನಿರ್ವಹಣೆಗಾಗಿ ಮೇಲೆ ಓದಲಾದ-1ರಲ್ಲಿ ಜಿಲ್ಲಾ ಪಂಚಾಯತಿಗಳಿಗೆ ತಾಲ್ಲೂಕುವಾರು ಹಂಚಿಕೆ ಮಾಡಿ ಮಾರ್ಗಸೂಚಿಯೊಂದಿಗೆ ಆದೇಶ ಹೊರಡಿಸಲಾಗಿದೆ. ಇಲಾಖೆಯ ಕ್ರೋಢೀಕೃತ ಸಂಕ್ಷಿಪ್ತ ಕ್ರಿಯಾ ಯೋಜನೆಗೆ ಉನ್ನತ ಮಟ್ಟದ ಸಮಿತಿ ಸಭೆಯ ಘಟನೋತ್ತರ ಮಂಜೂರಾತಿ ಕಾಯ್ದಿರಿಸಿ, ಮೇಲೆ ಓದಲಾದ-2ರಲ್ಲಿ ಆರ್ಥಿಕ ಇಲಾಖೆಯು ಅನುಮೋದನೆ ನೀಡಿದ್ದು,ಅದರಂತೆ ಜಿಲ್ಲಾ ಪಂಚಾಯತಿಗಳ ಕ್ರಿಯಾ ಯೋಜನೆಗೆ ಸುತ್ತೋಲೆ ಸಂಖ್ಯೆ:ಗ್ರಾಅಪ:127:ಆರ್‌ಆರ್‌ಸಿ:2013, ದಿನಾಂಕ:16-11-2013ರಲ್ಲಿ ಇಲಾಖೆಯಿಂದ ಅನುಮೋದನೆ ನೀಡಲಾಗಿದೆ. ಈ ಯೋಜನೆಯಡಿ 2013-14ನೇ ಸಾಲಿಗೆ ನಿಗದಿಪಡಿಸಿ ಹಂಚಿಕೆ ಮಾಡಿದ ಅನುದಾನ ರೂ.125.40ಕೋಟಿಗಳನ್ನು ಸರ್ಕಾರದ ಆದೇಶ ಸಂಖ್ಯೆ:FD/04/TFP/2012, ದಿನಾಂಕ:27-4-2012ರಲ್ಲಿ ಇಲಾಖೆಗೆ ನೀಡಿರುವ ಅವಕಾಶದನ್ವಯ ಬಿಡುಗಡೆಗೊಳಿಸಬಹುದಾಗಿದೆ. ಅದರಂತೆ ಜಿಲ್ಲಾ ಪಂಚಾಯತಿಗಳಿಗೆ ಅನುದಾನ ಬಿಡುಗಡೆ ಮಾಡಲು ಸರ್ಕಾರವು ತೀರ್ಮಾನಿಸಿರುತ್ತದೆ.

ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:127/1:ಆರ್‌ಆರ್‌ಸಿ:2013, ಬೆಂಗಳೂರು, ದಿನಾಂಕ:3-12-2013.**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ 2013-14ನೇ ಸಾಲಿನ ಆರ್ಥಿಕ ವರ್ಷದಲ್ಲಿ 13ನೇ ಹಣಕಾಸು ಆಯೋಗದ ಯೋಜನೆಯಡಿ ರಸ್ತೆ ಮತ್ತು ಸೇತುವೆ ನಿರ್ವಹಣೆಗಾಗಿ ನಿಗದಿಪಡಿಸಿದ ಅನುದಾನ ರೂ.125.40ಕೋಟಿಗಳನ್ನು (ರೂಪಾಯಿಗಳು **ಒಂದು ನೂರ ಇಪ್ಪತ್ತೈದು ಕೋಟಿಗಳು ಮತ್ತು ನಲವತ್ತು ಲಕ್ಷಗಳು** ಮಾತ್ರ) ಲೆಕ್ಕ ಶೀರ್ಷಿಕೆ-3054-80-196-1-04-300-block grants-Lumpsum ZP(ಯೋಜನೇತರ)(Link Head-3054-00-101-0-26)ರಡಿ ಅನುಬಂಧದಲ್ಲಿ ತೋರಿಸಿರುವಂತೆ ಕೆಳಕಂಡ ಷರತ್ತುಗಳಿಗೊಳಪಟ್ಟು ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

**ಷರತ್ತುಗಳು:**

1. 13ನೇ ಹಣಕಾಸು ಆಯೋಗದ ಕಾಮಗಾರಿಗಳ ಗುಣಮಟ್ಟ ನಿರ್ಧರಿಸಲು ಕಾಮಗಾರಿಗಳನ್ನು **Third Party** ತಪಾಸಣೆಗೆ ಒಳಪಡಿಸಬೇಕಾಗಿರುವುದರಿಂದ ಅದರಂತೆ ಕಾಮಗಾರಿಗಳನ್ನು **Third Party** ತಪಾಸಣೆಗೆ ಕಡ್ಡಾಯವಾಗಿ ಒಳಪಡಿಸತಕ್ಕದ್ದು.

2. ಈ ಅನುದಾನವನ್ನು ಈಗಾಗಲೇ 2013-14ರಲ್ಲಿ ಜಿಲ್ಲಾ ಪಂಚಾಯತಿಯಲ್ಲಿ ಅನುಮೋದನೆಯಾಗಿರುವ 13ನೇ ಹಣಕಾಸು ಆಯೋಗದ ಯೋಜನೆಯಡಿಯ ಕ್ರಿಯಾ ಯೋಜನೆಯಲ್ಲಿರುವ ರಸ್ತೆ ಕಾಮಗಾರಿ ಹೊರತು ಬೇರೆ ಯಾವುದೇಕಾಮಗಾರಿಗಳಿಗೆ ಉಪಯೋಗಿಸತಕ್ಕದ್ದಲ್ಲ.
3. ಜಿಲ್ಲಾ ಪಂಚಾಯತ್‌ಗಳು ಬಿಡುಗಡೆ ಮಾಡಿರುವ ಅನುದಾನವನ್ನು ಜಿಲ್ಲಾ ಖಜಾನೆಯು ಪ್ರಸ್ತುತ ವರ್ಷಕ್ಕೆ ನಿಗದಿಗೊಳಿಸುವ ದಿನಾಂಕದೊಳಗೆ ಡ್ರಾ ಮಾಡಿ ಪೂರ್ಣವಾಗಿ ವಿನಿಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಅನುದಾನ ವ್ಯಪಗತವಾಗದಂತೆ ನೋಡಿಕೊಳ್ಳತಕ್ಕದ್ದು. ಈ ಅನುದಾನ ನವೀಕರಣಕ್ಕೆ (Revalidation) ಯಾವುದೇ ಅವಕಾಶವಿರುವುದಿಲ್ಲ.
4. ಬಳಕೆಯಾದ ಹಣ ಹಾಗೂ ಕಾಮಗಾರಿ ಪ್ರಗತಿ ವಿವರವನ್ನು ಇಲಾಖೆಯ Worksoft website ನಲ್ಲಿ upload ಮಾಡತಕ್ಕದ್ದು.
5. ರಸ್ತೆ ಮತ್ತು ಸೇತುವೆ ನಿರ್ವಹಣಾ ಕಾಮಗಾರಿಗಳಿಗಾಗಿ ಬಿಡುಗಡೆಯಾದ ಅನುದಾನಕ್ಕೆ ಪ್ರತಿ ತ್ರೈಮಾಸಿಕ ಅವಧಿಗೆ ಅಂತ್ಯಗೊಂಡಂತೆ ಆರ್ಥಿಕ ಮತ್ತು ಭೌತಿಕ ಪ್ರಗತಿಯೊಂದಿಗೆ ಹಣ ಬಳಕೆ ಪ್ರಮಾಣ ಪತ್ರವನ್ನು ತಪ್ಪದೇ ಸಲ್ಲಿಸತಕ್ಕದ್ದು.
6. ಈ ಯೋಜನೆಯ ಪೂರ್ಣ ಅನುದಾನಕ್ಕೆ ಹಣ ಬಳಕೆ ಪ್ರಮಾಣ ಪತ್ರ ಹಾಗೂ ವೆಚ್ಚದ ವಿವರಗಳನ್ನು ದಿನಾಂಕ:15-4-2014ರೊಳಗೆ ಯಾವುದೇ ನೆಪಪೋಲೆಗೆ ಅವಕಾಶ ನೀಡದಂತೆ ಸರ್ಕಾರಕ್ಕೆ ತಪ್ಪದೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:FD/04/TFP/2012, ದಿನಾಂಕ:27-4-2012ರಲ್ಲಿ ಇಲಾಖೆಗೆ ನೀಡಿರುವ ಅವಕಾಶದನ್ವಯ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ:ಗ್ರಾಅಪ:509:ಆಂಆಸ:2013, ದಿನಾಂಕ:19-11-2013ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು
ಸುವರ್ಣ ಗ್ರಾಮೋದಯ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಪ್ರತಿಯನ್ನು:**

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು
2. ಮಹಾಲೇಖಪಾಲರು (ಆಡಿಟ್-1)) ಕರ್ನಾಟಕ, ಬೆಂಗಳೂರು
3. ಮಹಾಲೇಖಪಾಲರು (ಆಡಿಟ್-2) ಕರ್ನಾಟಕ, ಬೆಂಗಳೂರು
4. ಮಾನ್ಯ ಮುಖ್ಯ ಮಂತ್ರಿಗಳ ಆಪ್ತ ಕಾರ್ಯದರ್ಶಿಗಳು, ಮುಖ್ಯ ಮಂತ್ರಿಗಳ ಕಾರ್ಯಾಲಯ, ವಿಧಾನ ಸೌಧ, ಬೆಂಗಳೂರು.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
6. ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ,ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ಪಿಎಂಯು) (ಐಎಫ್) 5ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು.

9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಇವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
10. ಸರ್ಕಾರದ ಕಾರ್ಯದರ್ಶಿಗಳು, ಇವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
11. ವಿಶೇಷಾಧಿಕಾರಿಗಳು,(ಜಿ.ಪಂ) ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು,ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
12. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ, ಬಹುಮಹಡಿ ಕಟ್ಟಡ,ಬೆಂಗಳೂರು.
13. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
14. ಉಪ ನಿರ್ದೇಶಕರು, ನೆಟ್ ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ಖಜಾನಾ ಇಲಾಖೆ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು
15. ಅಧೀನ ಕಾರ್ಯದರ್ಶಿ, ವೆಚ್ಚ-6, ಜಿ.ಪಂ. ಆರ್ಥಿಕ ಇಲಾಖೆ, ಬೆಂಗಳೂರು.
16. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
17. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, 2ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು-9.
18. ಎಲ್ಲಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತಗಳ ಅಧೀಕ್ಷಕ ಅಭಿಯಂತರರು,
19. ಎಲ್ಲಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಅಭಿಯಂತರರು,
20. ಮಾಹಿತಿ ಕೇಂದ್ರಕ್ಕೆ(10 ಪ್ರತಿಗಳು)
21. ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಅನುಬಂಧ

13ನೇ ಹಣಕಾಸು ಆಯೋಗದ ಅನುದಾನ - ರಸ್ತೆ ನಿರ್ವಹಣಾ ಕಾಮಗಾರಿಗಳಿಗಾಗಿ 2013-14ನೇ ಸಾಲಿಗೆ ಬಿಡುಗಡೆ ಮಾಡಿದ ಅನುದಾನದ ವಿವರ

ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:127/1:ಆರ್‌ಆರ್‌ಸಿ:2013, ದಿ:4-12-2013ರ ಲಗತ್ತು

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಜಿಲ್ಲೆ | ಜಿಲ್ಲಾ ಪಂಚಾಯತಿಗಳಿಗೆ ತಾಲ್ಲೂಕುವಾರು ಹಂಚಿಕೆ ಮಾಡಿದ ಅನುದಾನ | ಈ ಆದೇಶದಲ್ಲಿ ಬಿಡುಗಡೆ ಮಾಡಿದ ಅನುದಾನ |
|---|---|---|---|
| 1 | ಬಾಗಲಕೋಟೆ | 451.77 | 451.77 |
| 2 | ಬೆಂಗಳೂರು (ಗ್ರಾ) | 229.96 | 229.96 |
| 3 | ಬೆಂಗಳೂರು (ನ) | 153.94 | 153.94 |
| 4 | ಬೆಳಗಾಂ | 844.94 | 844.94 |
| 5 | ಬಳ್ಳಾರಿ | 423.89 | 423.89 |
| 6 | ಬೀದರ್ | 287.13 | 287.13 |
| 7 | ಬಿಜಾಪುರ | 631.28 | 631.28 |
| 8 | ಚಾಮರಾಜ ನಗರ | 231.62 | 231.62 |
| 9 | ಚಿಕ್ಕಮಗಳೂರು | 362.10 | 362.10 |
| 10 | ಚಿಕ್ಕಬಳ್ಳಾಪುರ | 274.13 | 274.13 |
| 11 | ಚಿತ್ರದುರ್ಗ | 535.17 | 535.17 |
| 12 | ದಕ್ಷಿಣ ಕನ್ನಡ | 601.69 | 601.69 |
| 13 | ದಾವಣಗೆರೆ | 353.33 | 353.33 |
| 14 | ಧಾರವಾಡ | 266.45 | 266.45 |
| 15 | ಗದಗ | 253.29 | 253.29 |
| 16 | ಗುಲ್ಬರ್ಗಾ | 524.29 | 524.29 |
| 17 | ಹಾಸನ | 531.43 | 531.43 |
| 18 | ಹಾವೇರಿ | 321.94 | 321.94 |
| 19 | ಕೊಡಗು | 325.69 | 325.69 |
| 20 | ಕೋಲಾರ | 294.31 | 294.31 |
| 21 | ಕೊಪ್ಪಳ | 285.97 | 285.97 |
| 22 | ಮಂಡ್ಯ | 537.78 | 537.78 |
| 23 | ಮೈಸೂರು | 386.55 | 386.55 |
| 24 | ರಾಯಚೂರು | 377.18 | 377.18 |
| 25 | ರಾಮನಗರ | 178.80 | 178.80 |
| 26 | ಶಿವಮೊಗ್ಗ | 607.01 | 607.01 |
| 27 | ತುಮಕೂರು | 844.85 | 844.85 |
| 28 | ಉಡುಪಿ | 490.98 | 490.98 |
| 29 | ಉತ್ತರ ಕನ್ನಡ | 741.30 | 741.30 |
| 30 | ಯಾದಗೀರ್ | 191.23 | 191.23 |
| | ಒಟ್ಟು | 12540.00 | 12540.00 |

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು
ಸುವರ್ಣ ಗ್ರಾಮೋದಯ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.